Regd No B G 155 10-1-1970

SATYAVADI Daily, MYSORE 4 ★ 53 rd Year of Publication

ಸತ್ಯವಾದಿ

ಸುವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

Golden Jubilee Celebrated Paper

ಸ್ಥಾಪಕರು: ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಕೇರಳ ವಿಧಾನ ಸಭೆಯಲ್ಲಿ ಗೊಂದಲ

ಗರ್ಭಧಾರಣೆ

ಲುಕಾಸ— ಜಾಂಬಿಯಾದ ಡಾಕ್ಟರ್ ಜಾರ್ ಬಾಂಡ 9700 ಮಹಿಳೆಯರನ್ನು ಮಲಾವಿ ಮತ್ತು ಭಾರತದ ಒಂದು ಮೂಲಿಕೆಯ ಔಷಧವನ್ನು ಟೀಯಲ್ಲಿ ಒಂದು ತಿಂಗಳ ಕಾಲ ಕೊಟ್ಟು ಗರ್ಭಿಣಿಯರಾಗು ವಂತೆ ಮಾಡಿರುವದಾಗಿ ಹೇಳಿರುವನು.

○

ವಿಶ್ವ ಕಾಲ್ಚೆಂಡು ಪಂಥ

ಮೆಕ್ಸಿಕೋನಗರ— ವಿಶ್ವ ಕಾಲ್ಚೆಂಡು ಪಂಥಕ್ಕೆ 16 ರಾಷ್ಟ್ರಗಳು ಸ್ಪರ್ಧಿಸಿವೆ.

○

ಅಮೇರಿಕ ವಿಮಾನ ನಿಲ್ದಾಣ ಬಿಟ್ಟತು

ರಾವಲ್ಪಿಂಡಿ— ಅಮೆರಿಕಾವು ಬಡಬಾರ್ ವಿಮಾನನಿಲ್ದಾಣವನ್ನು ಪಾಕಿಸ್ತಾನಕ್ಕೆ ವಹಿಸಿತು – ಈ ವಿಮಾನದಿಂದಲೇ ಗಾರಿ ಪತ್ತರ್ ರಷ್ಯಾಕ್ಕೆ ಅಮೇರಿಕಾ ಗೂಢಚಾರ ವಿಮಾನದಲ್ಲಿ ಹೋಗಿ ಸಿಕ್ಕಿ ಬಿದ್ದಿದ್ದು.

★

ಖೋಟಾ ಗಾಂಧಿ ನಾಣ್ಯಗಳು

ಬೆಂಗಳೂರು— ರೂ 10 ಗಾಂಧಿ ನಾಣ್ಯ, ಮತ್ತು ನೆಹ್ರೂ 50 ಪೈಸೆ ಖೋಟಾ ನಾಣ್ಯ ತಯಾರಿಸುವ ತಂಡವನ್ನು ಸಿಐಡಿ ಯವರು ಪತ್ತೆಮಾಡಿ. 7 ಮಂದಿಯನ್ನು ಬಂಧಿಸಿರುವರು.

★

ಹೊಸ ಕಾಂಗ್ರೆಸ್ ಜೊತೆ ಜನತಾ ಪಕ್ಷ

ಬೆಂಗಳೂರು— ಮಾಜಿ ಕಾಂಗ್ರೆಸ್ಸು ನಾಯಕರಿಂದ 3 ವರ್ಷಗಳ ಹಿಂದೆ ಸ್ಥಾಪಿತವಾದ ಜನತಾ ಪಕ್ಷವು ಹೊಸ ಕಾಂಗ್ರೆಸಿನೊಡನೆ ಐಕ್ಯವಾಗಲು ನಿರ್ಧರಿಸಿತು.

★

ಸಾಸನಸಭೆಯಲ್ಲಿ ಮಾರ್ಕ್ಸಿಸ್ಟರ ಗಲಾಟೆ

ತಿರುವೇಂದ್ರಂ— ಶಾಸನಸಭೆಯಲ್ಲಿ ಸ್ವತಂತ್ರ ಗೌರ್ನರರ ಭಾಷಣವಾಗುತ್ತಿದ್ದಾಗ ಮಾರ್ಕ್ಸಿಸ್ಟ ಪಕ್ಷದ ಸದಸ್ಯರು ವಿಪರೀತ ಕೂಗಾಟ ಪ್ರದರ್ಶಿಸಿದರು ; ಭಾಷಣವು ಯಾರಿಗೂ ಕೇಳಿಸದಿದ್ದರೂ ಗೌರ್ನರರು ಪೂರ್ತಿ ಓದಿಯೇಬಿಟ್ಟರು.

○

ಡಾ || ಮೋಡಿಯವರ ಕಾರ್ಯಕ್ರಮ

ನೇತ್ರದಾನಿ ಪದ್ಮಭೂಷಣ ಡಾ|| ಎಂ ಸಿ ಮೋದಿಯವರ ಶಿವಮೊಗ್ಗಾ ಜಿಲ್ಲೆಯಲ್ಲಿನ ಕಾರ್ಯಕ್ರಮ– ತಾ|| 19 ಚನ್ನಗಿರಿ. ಹೊನ್ನಾಳಿ, ಶಿಕಾರಿಪುರ, ಸೊರಬ, ತಾ|| 20 ಹೊಸನಗರ. ಭದ್ರಾವತಿ. ತಾ || 21 ಶಿವಮೊಗ್ಗಾ. ಶಿವಮೊಗ್ಗಾದಲ್ಲಿ ಮುನಿಸಿಪಲ್ ಹಾಲ್‌ನಲ್ಲಿ ಉಚಿತ ನೇತ್ರ ಆಪರೇಷನ್ ಶಿಬಿರ ಏರ್ಪಡಿಸಲಾಗಿದೆ.

○

ಅವಿಶ್ವಾಸ

ಭೂಪಾಲ್ – ಮಧ್ಯಪ್ರದೇಶದ 10 ತಿಂಗಳ ಕಾಂಗ್ರೆಸ್ ಮಂತ್ರಿಮಂಡಲದ ಮೇಲೆ ಶಾಸನಸಭೆಯಲ್ಲಿ ಅವಿಶ್ವಾಸ ಸೂಚನೆಯು ಚರ್ಚೆಗೆ ಅಡ್ಮಿಟ್ ಆಯಿತು

○

ಖೋಖೋ ಪಂಥದಲ್ಲಿ ಗಲಾಟೆ

ಮೈಸೂರು— ನಿನ್ನೆ ಯುವರಾಜಾ ಕಾಲೇಜು ಆವರಣದಲ್ಲಿ ನಡೆದ ಅಖಿಲ ಭಾರತ ಅಂತರ್‌ರಾಷ್ಟ್ರೀಯ ಖೋಖೋ ಪಂಥದಲ್ಲಿ (ಮಹಿಳೆಯರ) 1 ಸಾಯಿಂಟಿಸಿದ ಮೈಸೂರು ನಾಗಪುರಕ್ಕೆ ಸೋತಿತು – ಅಂಪೈರು ಘೋಷಿಸಿದಾಗ, ಗುಂಪು ಕುರ್ಚಿ, ಕಲ್ಲುಗಳನ್ನು ಎಸೆಯಲು ಪ್ರಾರಂಭಿಸಿತು – ಪೋಲೀಸರು ಚದುರಿಸಲು ಶ್ರಮಿಸಿದರು.

ಭೂಮಾಲೀಕರ ಪರಿಹಾರಕ್ಕೆ

ಬೆಂಗಳೂರು— ಭೂಮಾಲೀಕರಿಗೆ ಪರಿಹಾರ ನೀಡಲು ರಾಷ್ಟ್ರೀಕರಣ ಬ್ಯಾಂಕುಗಳಿಂದ ಹಣ ಪಡೆಯುವ ವಿಷಯದಲ್ಲಿ ತಾ || 13 ರಂದು ಮುಖ್ಯಮಂತ್ರಿಯವರು ಬ್ಯಾಂಕು ಪ್ರತಿನಿಧಿಗಳೊಡನೆ ಪ್ರಪ್ರಥಮ ಮಾತುಕತೆ ನಡೆಸಲಿದ್ದಾರೆ.

○

ಮಾರಕ್ಸಿಸ್ಟರ ದಾಂಧಲೆ

ತಿರುವೇಂದ್ರಂ— ಕುಟ್ಟನಾಡ್‌ನಲ್ಲಿ ಮಾರಕ್ಸಿಸ್ಟರು ಭೂಮಾಲೀಕರ ಮೇಲೆ ಬೀಳುತ್ತಾ ಭೂಮಿ ಆಕ್ರಮಿಸುತ್ತಿರುವರು – 3 ಮಂದಿ ಮಾರಕ್ಸಿಸ್ಟರು ಒಬ್ಬ ಕಾಂಗ್ರೆಸಿಗನ ಮೇಲೆ ದ್ರಾವಕ ಬಲ್ಬನ್ನು ಎಸೆದು ಚೂರಿಯಿಂದ ತಿವಿದರು ಅವನು ಆಸ್ಪತ್ರೆಗೆ ಸಾಗಿಸಲ್ಪಟ್ಟನು – ಒಬ್ಬ ಭೂಮಾಲೀಕನನ್ನು ಕಬ್ಬಿಣದ ಸಲಾಕೆಯಿಂದ ಹೊಡೆದರು – ಅವರಿಂದ ಆಕ್ರಮಿಸಲ್ಪಟ್ಟಿರುವ ತನ್ನ ಭೂಮಿಯಲ್ಲಿ ತೆಂಗಿನಕಾಯಿ ಕುಯ್ಯಿಸಲು ಭೂಮಾಲೀಕರು ಬಂದಾಗ ಮಾರ್ಕ್ಸಿಸ್ಟರು ಪೋಲೀಸು ವ್ಯಾನನ್ನು ಸುತ್ತುಗಟ್ಟಿ ಡ್ರೈವರನ್ನು ಹೊಡೆದರು ; 8 ಮಂದಿ ದಸ್ತಗಿರಿ ಮಾಡಲ್ಪಟ್ಟರು.

●

ಭೂಕಂಪದಿಂದ ವಿಪತ್ತು

ಟೋಕಿಯೋ— ದಕ್ಷಿಣ ಚೀನಾದಲ್ಲಾದ ಭೂಕಂಪವು ತೀವ್ರ ವಿಪತ್ಕಾರಕವಾಗಿದೆಯೆಂದು ಚೀನಾ ವಾರ್ತಾ ಸಂಸ್ಥೆ ಪ್ರಕಟಿಸಿದೆ

★

ವಿದೇಶೀ ವಿನಿಮಯ

ಕಲ್ಕತ್ತಾ— ಚುಟ್ಟಾ ತಯಾರಿಸುವ ಯಂತ್ರಗಳನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲು ಭಾರತ ಸರ್ಕಾರ ರೂ. 20 ಲಕ್ಷ ವಿದೇಶೀ ವಿನಿಮಯ ಬಿಡುಗಡೆ ಬಗ್ಗೆ ಪರ್ಯಾಲೋಚಿಸುತ್ತಿದೆ

ಕಾಂಗ್ರೆಸ್ ಹೆಸರು ಮತ್ತು ಚುನಾವಣಾ ಗುರುತು

ನವದೆಹಲಿ— ಪ್ರಧಾನಿ ಇಂದಿರಾ ಗಾಂಧಿ ಮತ್ತಿತರ 32 ಜನರ ಮೇಲೆ ಡೆಲ್ಲಿ ಹೈಕೋರ್ಟ್‌ನಲ್ಲಿ ಪಾರ್ಲಿಮೆಂಟು ಸದಸ್ಯ ದಿಗ್ವಿಜಯ ನಾರಾಯಣಸಿಂಗರು ಮೊಖದ್ದಮೆ ಹಾಕಿ, ಇವರುಗಳು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಹೆಸರನ್ನು ಉಪಯೋಗಿಸದಂತೆಯೂ, ಅದರ ಚುನಾವಣಾ ಗುರುತನ್ನು ಉಪಯೋಗಿಸದಂತೆಯೂ ಆಜ್ಞೆ ಮಾಡಲು ಕೋರಿದ್ದಾರೆ.

★

ಸಿಲೋನಿಗೆ ಗೋಧಿ ಹಿಟ್ಟು

ನವದೆಹಲಿ— ಭಾರತವು ಸಿಲೋನಿಗೆ 10000 ಟನ್ ಗೋಧಿಹಿಟ್ಟು ಸರಬರಾಜು ಮಾಡಲು ಒಪ್ಪಿದೆ.

●

ಸಾಂಕೇತಿಕ ಮುಷ್ಕರ

ಹೈದರಾಬಾದು— ತಮ್ಮ ಕೇಳಿಕೆ ಬಗ್ಗೆ ಸರಕಾರ ಅಲಕ್ಷ್ಯ ಮಾಡುತ್ತಿರುವದನ್ನು ಪ್ರತಿಭಟಿಸಿ ಮಾರ್ಚ್ ಪ್ರಥಮ ವಾರದಲ್ಲಿ 2 ಲಕ್ಷ ಸರ್ಕಾರಿ ನೌಕರರನ್ನು ಹೊಂದಿರುವ 9 ಸಂಘಗಳು ಒಂದು ದಿನದ ಸಾಂಕೇತಿಕ ಮುಷ್ಕರಕ್ಕೆ ಕರೆ ಕೊಡಲಿವೆ.

★

ಆಹಾರ ವಲಯಗಳು

ಮದರಾಸು— ಅಂತರರಾಜ್ಯ ಆಹಾರ ಓಡಾಟದ ಮೇಲಿನ ಪ್ರತಿಬಂಧಕವನ್ನು ಸಧ್ಯಕ್ಕೆ ತೆಗೆಯುವಂತಿಲ್ಲವೆಂದು ಭಾರತದ ಆಹಾರ ಮಂತ್ರಿ ಶ್ರೀ ಶಿಂಡೆ ಹೇಳಿದರು.

★

ಗಂಧದ ಮರದ ಚಕ್ಕೆ ವಶ

ಸಕಲೇಶಪುರ— ಕಟ್ಟೇಹಳ್ಳಿ ಹತ್ತಿರ 1 ಟನ್ ಗಂಧದ ಮರದ ಚೂರುಗಳನ್ನು ಪೋಲೀಸಿನವರು ವಶಪಡಿಸಿಕೊಂಡು ಇಬ್ಬರು ಕೇರಳದವರನ್ನು ದಸ್ತಗಿರಿಮಾಡಿದರು.

ವಾರ್ತಾವಿಶೇಷಗಳು

ಬೆಂಗಳೂರು— ರಾಷ್ಟ್ರೀಯ ಮಕ್ಕಳ ಕಲ್ಯಾಣ ನಿಧಿಗೆ ರೂ 80 ಕೋಟಿ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಯತ್ನ ನಡೆಯುತ್ತಿದೆ.

ಕೋಲಾರ— ಲೈಸೆನ್ಸಿಲ್ಲದೆ ಟೀಯೆಸ್ಸೆಸ್ಸೆ ಮಾರಿದ ಮೂರು ಮಂದಿಗೆ ತಲಾ ರೂ 100 ಜುಲ್ಮಾನೆ, ಜುಲಾನೆ ಕೊಡದಿದ್ದರೆ 3 ತಿಂಗಳು ಸಜಾ ವಿಧಿಸಲಾಗಿದೆ.

ಹೈದರಾಬಾದು— "ಶಾಂತತಾ : ಕೊರ್ಟ್ ಚಾಲೂ ಅಹೆ' (ನಿಶ್ಶಬ್ದ ; ಕೋರ್ಟು ನಡೆಯುತ್ತಿದೆ) ಎಂಬ ಶ್ರೀ ವಿಜಯ ತೆಂಡೂಲ್ಕರರ ಮರಾಟಿ ನಾಟಕಕ್ಕೆ ಈ ವರ್ಷದ ಅತ್ಯುತ್ತಮ ನಾಟಕವೆಂದು ಘೋಷಿಸಿ ಕಮಲಾದೇವಿ ಪಾರಿತೋಷಕ ರೂ 5000 ಕೊಡಲಾಗಿದೆ ; ಈ ನಾಟಕವನ್ನು ಭಾರತದ 12 ಭಾಷೆಗಳಲ್ಲಿ ಭಾಷಾಂತರಿಸಿ, ಅಕ್ಟೋಬರು 24 ವಿಶ್ವ ನಾಟಕ ದಿನದಂದು ಭಾರತಾದ್ಯಂತ ಅಡಿಸಲಾಗುವುದು.

ಚಿಕಾಗೋ— ಒಬ್ಬ ಆಫ್ರೋ-ಯೂರೇಷಿಯರ್ ಮೂಲದ ಅಮೇರಿಕಾ ರಾಷ್ಟ್ರಿಯನು ಭಾರತದ ತಾಜ್‌ಮಹಲ್ ಹಂತದ ಮೇಲೆ ವಿವಾಹವಾಗಲು ಬಯಸುತ್ತಿದ್ದಾನೆ. 'ಪ್ರೇಮ ಚಕ್ರವರ್ತಿ' ಷಹಜಹಾನ್ ಎಂದು ರುಜು ಮಾಡುತ್ತಾನೆ; ಅವನನ್ನು ವರಿಸಲು ಮುಮ್ತಾಜ್ ಬೇಗಂ ಒಬ್ಬಳು ಇನ್ನೂ ಸಿಕ್ಕಿಲ್ಲ.

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಅದರಲ್ಲಿ ಜಾಹಿರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ ಅಡ್ರೆಸ್

1. ಶ್ರೀ ಆನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ
2. ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.
3. ಡಾ || ಪಿ ಎಸ್ ನಾರಾಯಣ್, ಮತ್ತು ಪಿ ಎಸ್. ವಿಶ್ವನಾಥ್, ಪ್ರಾಣಿದಯಾ ಪ್ರಚಾರಕರು, 320 – 5 ನೆ ಬ್ಲಾಕ್, ಜಯನಗರ, ಬೆಂಗಳೂರು
4. ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು

SHAKTI

SUDHA

A Superb Tonic

ದೇಶದ ಹಿತಕಾಗಿ

ಕುಟುಂಬ ಯೋಜನೆ

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ಶಾ. 2-1-70 ರಿಂದ

ಶಿಲ್ಪ ಅಮೋಘ ಪ್ರಾರಂಭ

ಓರ್ವ ಹೆಣ್ಣಿನ ಮನಕರಗುವ ಸನ್ನಿವೇಶಗಳಿಂದ ಕೂಡಿದ ಅಮೋಘ ಕನ್ನಡ ಚಿತ್ರ

ಗೆಜ್ಜೆಪೂಜೆ

ನಟವರ್ಗ— ಕಲ್ಪನ, ಅಶ್ವತ್, ಬಾಲಕೃಷ್ಣ, ಪಂಡರಿಬಾಯಿ

ನಿರ್ದೇಶನ : ಪುಟ್ಟಣ್ಣ ಕಣಗಾಲ್ ಸಂಗೀತ : ವಿಜಯ ಭಾಸ್ಕರ್

[ದಿನ 3 ಪ್ರದರ್ಶನಗಳು]

ಅಪೆರಾ— ಅಮೋಘ 3ನೇ ವಾರ

.... ಅತ್ಯಮೋಘ ಹಿಂದಿ ಚಿತ್ರ ....

ನನ್ನ ಪರಿಪ್ಪು

ನಿರ್ದೇಶನ ಟಿ. ಪ್ರಕಾಶರಾವ್ ಸಂಗೀತ ಕಲ್ಯಾಣಜಿ ಆನಂದಜಿ (ಕಲರ್)

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protect the Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore 6